# Second Semester of Three Year LL.B. Examination, January 2012
## COMPANY LAW (Course – II)

Time : 3 Hours Max. Marks : 100

**Instructions** : 1. Answer **all 5** questions.

2. **One** essay type and **one** short note question or problem from **each** Unit to be attempted, which is referred as part **(a)** and **(b)** in all the units.

3. Figures to the **right** indicate marks.

4. Answer should be written either in **English** or **Kannada completely**.

### UNIT – I

Q.No. 1. (a) Discuss briefly the advantages of incorporating a company. Marks : 15

ಕಂಪನಿಯನ್ನು ಸಂಯೋಜನೆಗೊಳಿಸುವುದರಿಂದ ಆಗುವ ಅನುಕೂಲಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

OR/**ಅಥವಾ**

Explain the effects of Ultra-vires transactions of a company.

ಒಂದು ಕಂಪನಿಯ ಅಧಿಕಾರತೀತ ವ್ಯವಹಾರದಿಂದ ಆಗುವ ಪರಿಣಾಮಗಳನ್ನು ವಿವರಿಸಿರಿ.

(b) 'A' company registered as private company under the Companies Act. For its business it is in need of huge amount. By issuing prospectus, company received this amount as share amount from the public. Is this issue of prospectus valid ? Marks : 5

ಕಂಪನಿ ಅಧಿನಿಯಮುದಡಿಯಲ್ಲಿ 'A' ಕಂಪನಿಯು ಖಾಸಗಿ ಕಂಪನಿಯಾಗಿ ನೋಂದಣಿಯಾಗಿತ್ತು. ಕಂಪನಿ ತನ್ನ ವ್ಯವಹಾರಕ್ಕೆ ದೊಡ್ಡ ಮೊತ್ತದ ಹಣದ ಅವಶ್ಯಕತೆ ಇದ್ದುದರಿಂದ ಪರಿಚಯ ಪತ್ರಿಕೆ ಬಿಡುಗಡೆ ಮಾಡಿ ಸಾರ್ವಜನಿಕರಿಂದ ಶೇರು ಹಣದ ರೂಪದಲ್ಲಿ ಸ್ವೀಕರಿಸಿತು. ಈ ರೀತಿ ಪರಿಚಯ ಪತ್ರಿಕೆ ಬಿಡುಗಡೆ ಮಾಡಿದ್ದು ಸರಿಯೇ ?

OR/**ಅಥವಾ**

In a train accident all the 10 members of private company were killed. Does the company cease to exist because all the members have died ? Give reasons.

ಖಾಸಗಿ ಕಂಪನಿಯ ಎಲ್ಲಾ 10 ಸದಸ್ಯರು ಒಂದು ರೈಲು ಅಪಘಾತದಲ್ಲಿ ಮರಣ ಹೊಂದುತ್ತಾರೆ. ಎಲ್ಲಾ ಸದಸ್ಯ ಮರಣ ಹೊಂದಿದ್ದರಿಂದ ಕಂಪನಿ ಕೊನೆಗೊಳ್ಳುವುದೇ ? ಕಾರಣ ಕೊಡಿರಿ

## UNIT – II

Q.No. 2. (a) "An outsider while dealing with the company shall not enquire the internal matters". Explain with exceptions. Marks : 15

''ಒಬ್ಬ ಹೊರಗಿನ ವ್ಯಕ್ತಿಯು ಕಂಪನಿಯ ಜೊತೆ ವ್ಯವಹರಿಸಬೇಕಾದರೆ ಅದರ ಒಳವಿಷಯಗಳನ್ನು ವಿಚಾರಿಸಬೇಕಾಗಿಲ್ಲ''. ಅಪವಾದಗಳೊಂದಿಗೆ ವಿವರಿಸಿರಿ.

OR/**ಅಥವಾ**

Explain briefly legal position of Director

ನಿರ್ದೇಶಕರ ಕಾನೂನು ಬದ್ಧ ಸ್ಥಾನಮಾನವನ್ನು ಸಂಕ್ಷಿಪ್ತವಾಗಿ ಚರ್ಚಿಸಿರಿ.

(b) A proxy had exercised vote in the first poll of the meeting but it was revoked before the final poll by the share-holder. Is this revocation valid ? Marks : 5

ಒಬ್ಬ ಅಭಿಮತ ಪಾತ್ರಧಾರಿಯು ಸಭೆಯಲ್ಲಿ ಮೊದಲನೇಸುತ್ತಿನ ಮತದಾನದಲ್ಲಿ ಮತ ಹಾಕಿದ್ದನು. ಆದರೆ ಕೊನೆಯ ಸುತ್ತಿನ ಮತದಾನದ ಪೂರ್ವದಲ್ಲಿ ಶೇರುದಾರನು ಅಭಿಮತ ಪತ್ರವನ್ನು ಹಿಂತೆಗೆದುಕೊಂಡನು. ಈ ಹಿಂತೆಗೆದುಕೊಳ್ಳುವಿಕೆ ಕ್ರಮಬದ್ಧವೇ ?

OR/**ಅಥವಾ**

'x' is already director of 15 companies. Mind free company by recognising his skill and competence appoints him as its director, Is this appointment valid ?

'x' ನು ಈಗಾಗಲೇ 15 ಕಂಪನಿಗಳ ನಿರ್ದೇಶಕನಾಗಿದ್ದಾನೆ. ಅವನ ಕೌಶಲ್ಯ ಮತ್ತು ಸಕ್ಷಮತೆಯನ್ನು ಗುರುತಿಸಿ ಮೈಂಡ್ ಫ್ರೀ ಕಂಪನಿಯು ತನ್ನ ನಿರ್ದೇಶಕನನ್ನಾಗಿ ನೇಮಿಸುತ್ತದೆ. ಈ ನೇಮಕಾತಿ ಊರ್ಜಿತವೇ ?

## UNIT – III

Q.No. 3. (a) What is Allotment of shares ? Explain statutory restrictions and general principles of Allotment of shares. Marks : 15

ಶೇರು ಹಂಚಿಕೆ ಎಂದರೇನು ? ಶೇರು ಹಂಚಿಕೆಯ ಬಗ್ಗೆ ಇರುವ ಶಾಸನೀಯ ನಿರ್ಬಂಧಗಳು ಮತ್ತು ಸಾಮಾನ್ಯ ತತ್ವಗಳನ್ನು ವಿವರಿಸಿರಿ.

OR/**ಅಥವಾ**

What is voluntary winding up ? Explain members voluntary winding up.

ಸ್ವ-ಇಚ್ಛೆ ಸಮಾಪನೆ ಎಂದರೇನು ? ಸದಸ್ಯರ ಸ್ವ-ಇಚ್ಛೆ ಸಮಾಪನೆ ಬಗ್ಗೆ ವಿವರಿಸಿರಿ.

(b) Due to Tsunami disaster 'X' company suspends its business for more than one year. 'A' shareholder in that company submits an application to the court for its winding up. Will he succeed ? Marks : 5

ಸುನಾಮಿ ದುರಂತದ ಕಾರಣದಿಂದ 'x' ಕಂಪನಿಯು ತನ್ನ ವ್ಯವಹಾರವನ್ನು ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯ ಅಮಾನತುಗೊಳಿಸಿತು. ಕಂಪನಿಯ ಶೇರುದಾರನಾದ 'A' ನು ಈ ಕಾರಣದ ಮೇಲೆ ಅದರ ಸಮಾಪನೆಗಾಗಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ. ಅವನು ಗೆಲ್ಲುವನೇ ?

OR/**ಅಥವಾ**

'x' a minor was registered as a share holder. After attaining majority he received dividend from the company subsequently the company went into liquidation. 'x' denies liability as a shareholder. Decide.

'x' ಎಂಬ ಅಪ್ರಾಪ್ತ ವಯಸ್ಕನು ಒಂದು ಕಂಪನಿಯ ಸದಸ್ಯನಾಗಿ ನೋಂದಾಯಿಸಲ್ಪಟ್ಟನು. ಅವನು ಪ್ರಾಪ್ತವಯಸ್ಕನಾದ ಬಳಿಕ ಕಂಪನಿಯಿಂದ ಲಾಭಾಂಶವನ್ನು ಸ್ವೀಕರಿಸುತ್ತಾನೆ. ತದನಂತರ ಕಂಪನಿ ದಿವಾಳಿ ಆಗುತ್ತದೆ. 'x' ನು ತನ್ನ ಹೊಣೆಗಾರಿಕೆಯನ್ನು ಅಲ್ಲ ಗಳೆಯುತ್ತಾನೆ ? ತೀರ್ಮಾನಿಸಿ.

## UNIT – IV

Q.No. 4. (a) Discuss the powers of recognised stock exchange to make bye-laws. Marks : 15

ಮಾನ್ಯ ಮಾಡಲ್ಪಟ್ಟ ಶೇರು ವಿನಿಮಯ ಕೇಂದ್ರಗಳ ಉಪ ಕಾನೂನು (ಪ್ರತ್ಯಾಯೋಜಿತ ಕಾನೂನು) ಗಳನ್ನು ಮಾಡುವ ಅಧಿಕಾರಗಳ ಬಗ್ಗೆ ಚರ್ಚಿಸಿರಿ.

OR/**ಅಥವಾ**

Write explanatory note on Registration of stock-brokers, sub-brokers and share transfer agents.

ಸ್ಟಾಕ್ ದಳ್ಳಾಳಿಗಳು, ಉಪ-ದಳ್ಳಾಳಿಗಳು ಮತ್ತು ಶೇರು ವರ್ಗಾವಣೆ ಕಾರ್ಯಬಾರಿಗಳ ನೋಂದಣಿ ಬಗ್ಗೆ ಒಂದು ವಿವರವಾದ ಟಿಪ್ಪಣಿ ಬರೆಯಿರಿ.

(b) Write a note on Appeal to Securities Appellate Tribunal under the SEBI Act -1992 Marks : 5

ಸೆಬಿ ಅಧಿನಿಯಮ 1992 ರ ಅಡಿಯಲ್ಲಿ ಶೇರು ಮೇಲ್ಮನವಿ ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸುವ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

OR/**ಅಥವಾ**

Definition of Securites.

ಸೆಕ್ಯೂರಿಟಿಸ್‌ನ ವ್ಯಾಖ್ಯಾನ.

**UNIT – V**

Q.No. 5. (a) Define the terms “Person resident in India”, “Service” under the Foreign Exchange Management Act. Marks : 15

ವಿದೇಶಿ ವಿನಿಮಯ ವ್ಯವಸ್ಥಾಪನೆ ಅಧಿನಿಯಮದಡಿಯಲ್ಲಿ ‘‘ಭಾರತದಲ್ಲಿ ವಾಸಿಸುವ ವ್ಯಕ್ತಿ, ‘‘ಸೇವೆ’’ ಪದಗಳನ್ನು ವ್ಯಾಖ್ಯಾನಿಸಿರಿ.

OR/**ಅಥವಾ**

Discuss the establishment, composition and term of office of the chairperson and other members of Competition Commission under the Competition Act, 2002.

ಪೈಪೋಟಿ ಅಧಿನಿಯಮ 2002ರ ಅಡಿಯಲ್ಲಿ ಪೈಪೋಟಿ ಆಯೋಗದ ಸ್ಥಾಪನೆ, ರಚನೆ ಮತ್ತು ಅಧ್ಯಕ್ಷರ ಹಾಗೂ ಇತರೆ ಸದಸ್ಯರ ಅಧಿಕಾರಾವಧಿ ಬಗ್ಗೆ ಚರ್ಚಿಸಿರಿ.

(b) Write short note : Marks : 5

ಲಘು ಟಿಪ್ಪಣಿ ಬರೆಯಿರಿ.

B.P.O.

ಬಿ.ಪಿ.ಓ.

OR/**ಅಥವಾ**

Goods (Competition Act)

ಸರಕುಗಳು (ಪೈಪೋಟಿ ಅಧಿನಿಯಮ)